# ಭಾಗವತದ ಕಥೆಗಳ ಸಂಕಲನ




*ಕೃತಿ :* **ಶ್ರೀಮದ್ ಭಾಗವತಸಂದೇಶ – ಕಥಾಮಾಲಾ**

*ಲೇಖಕರು :* **ಡಾ. ವಾಗೀಶ್ವರೀ ಶಿವರಾಮ**

*ಪ್ರಕಾಶಕರು :* **ವಾಗೀಶ್ವರೀ ಪ್ರಕಾಶನ ವಾಗೀಶ್ವರೀ ನಿವಾಸ, 2-93/4, ಸರಕಾರಿ ಕಾಲೇಜು ಮಾರ್ಗ ಕಾವೂರು, ಮಂಗಳೂರು-575 015**

*ಪುಟಗಳು :* **204**

*ಬೆಲೆ :* **160/**

ಭಾಗವತ ಪುರಾಣದಲ್ಲಿ ಅಸಂಖ್ಯಾತ ಕಥೆಗಳಿವೆ. ಅತ್ಯಂತ ಜನಪ್ರಿಯವಾಗಿರುವ ಈ ಗ್ರಂಥವನ್ನು ಹಲವು ರೀತಿಗಳಲ್ಲಿ, ಹಲವು ರೂಪಗಳಲ್ಲಿ ಕನ್ನಡಕ್ಕೆ ತರುವ ಪ್ರಯತ್ನ ಈಗಾಗಲೇ ಹಲವು ಬಾರಿ ನಡೆದಿದೆ. ಇಲ್ಲಿನ ಕಥೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ನಿರೂಪಿಸಿ, ಅಲ್ಲಿನ ಅಂತರಾರ್ಥವನ್ನು ತಿಳಿಯಪಡಿಸಿರುವುದು ಶ್ರೀಯುತ ಡಾ. ವಾಗೀಶ್ವರೀ ಶಿವರಾಂ ಅವರ '**ಶ್ರೀಮದ್ ಭಾಗವತ ಸಂದೇಶ-ಕಥಾಮಾಲ**' ಗ್ರಂಥದ ವಿಶೇಷತೆ.

ಆರಂಭದಲ್ಲಿ ಕೆಲವು ಪ್ರಾರ್ಥನಾಪದ್ಯಗಳಿವೆ. ಈ ಪದ್ಯಗಳಲ್ಲಿ ಹಾಗೂ ಮುಂದೆ ಬರುವ ಅನೇಕ ಶ್ಲೋಕಗಳ ಮುಂದೆ ಕನ್ನಡದಲ್ಲಿ ಅವುಗಳ ಅರ್ಥವನ್ನೂ ನೀಡಿರುವುದು ಸಾಮಾನ್ಯ ಓದುಗರಿಗೆ ಅತ್ಯಂತ ಉಪಯುಕ್ತವಾಗಿದೆ. ಕಥೆಗೆ ಪೂರಕವಾಗಿ ನಡುನಡುವೆ ಭಾಗವತದ ಮೂಲ ಶ್ಲೋಕಗಳನ್ನು ಅನುವಾದದೊಂದಿಗೆ ನೀಡಲಾಗಿದೆ. ಹೀಗೆ ಉದ್ಧರಿಸುವ ಶ್ಲೋಕಗಳಲ್ಲಿ ಕೆಲವೊಮ್ಮೆ ನೀತಿ ವಾಕ್ಯ, ನುಡಿಗಟ್ಟು, ಸುಭಾಷಿತ, ಗೀತಾಶ್ಲೋಕಗಳು ಸೇರಿವೆ.

ಕೃತಿಯ 'ಬೆನ್ನುಡಿ'ಯಲ್ಲಿ ಹೀಗೆ ಬರೆದಿದೆ: ''ಈ ಕೃತಿಯಲ್ಲಿ ಸ್ಪಷ್ಟತೆ, ಸರಳತೆ, ಭಾವುಕತೆ, ನಿಖರತೆ, ಸೂತ್ರತೆ, ಸಂಕ್ಷಿಪ್ತತೆ, ವೈಜ್ಞಾನಿಕತೆ, ಆಧುನಿಕತೆ, ಪ್ರಾಯೋಗಿಕತೆ, ರಸಿಕತೆ, ಮೂಲಬದ್ಧತೆ, ವಿದಗ್ಧತೆ — ಈ ದ್ವಾದಶ ಅಂಶಗಳು ಪ್ರಧಾನವಾಗಿವೆ.''

ಕಥೆಗಳ ನಿರೂಪಣೆ ಅತ್ಯಂತ ರೋಚಕವಾಗಿದೆ. ನೇರ ಹಾಗೂ ಸರಳವಾದ ಭಾಷೆಯೊಂದಿಗೆ, ನಡುನಡುವೆ ಸಂಭಾಷಣೆಗಳೊಂದಿಗೆ ಕಥೆಗಳ ನಿರೂಪಣೆ ತುಂಬ ಪರಿಣಾಮಕಾರಿಯೆನಿಸಿದೆ. ಒಂದು ಸಣ್ಣ ಉದಾಹರಣೆ:

''**ಪರೀಕ್ಷಿತ ರಾಜ,** ಹಸಿವು-ನೀರಡಿಕೆ, ಆಯಾಸಗಳಿಲ್ಲದೇ ಗಂಗಾತಟದಲ್ಲಿ ಭಗವದ್ ಭಕ್ತರ ಕಥಾಶ್ರವಣದಲ್ಲಿ ತನ್ಮಯನಾಗಿದ್ದ. **ಶುಕಮುನಿಗಳನ್ನು** ಕುರಿತು – ''ಮಹಾತ್ಮರೇ! ಉತ್ತಾನಪಾದ ರಾಜನ ವಂಶದವರ ಕಥೆ ತಿಳಿಸಿದಿರಿ. **ಪ್ರಿಯವ್ರತನ** (ಉತ್ತಾಪಾದನ ಅಣ್ಣ) ಹಾಗೂ ಆತನ ವಂಶದವರ ಕಥೆ ತಿಳಿಸಿ'' ಎಂದು ಕೇಳಿಕೊಂಡ. **ಶುಕರು ಕಥೆ ಹೇಳಲು ಆರಂಭಿಸಿದರು:**

ಸ್ವಾಯಂಭುವ ಮನುವಿನ ಹಿರಿಯ ಮಗನಾದ **ಪ್ರಿಯವ್ರತ,** ಬಾಲ್ಯದಿಂದಲೂ ವಿರಕ್ತ, ಧ್ಯಾನಾಸಕ್ತ. ತಂದೆ, ಮಗನಿಗೆ – ''**ವಿವಾಹಿತನಾಗಿ, ಸಂತಾನ ಪಡೆದುಕೊ. ರಾಜ್ಯಭಾರದ ಕರ್ತವ್ಯದ ಹೊಣೆ ಹೊತ್ತುಕೊ**'' ಎಂದು ತಿಳಿಸಿದ. ಆದರೆ ಮಗ, ಅಪ್ಪನ ಮಾತುಗಳಿಗೆ ಗೌರವ ಕೊಡದೆ, ಆತ್ಮಾರಾಮನಾಗಿದ್ದ. ಅಜ್ಜನಾದ **ಬ್ರಹ್ಮದೇವನೇ ಬಂದು-''ಮಗು! ನೀನು ಕ್ಷತ್ರಿಯ ಕುಲದಲ್ಲಿ ಜನಿಸಿರುವುದು ಭಗವಂತನ ಇಚ್ಛೆ. ಆದ್ದರಿಂದ ಗೃಹಸ್ಥನಾಗಿ, ರಾಜ್ಯಭಾರ ಮಾಡುವುದು ನಿನ್ನ ಕರ್ತವ್ಯ**'' ಎಂದು ಬುದ್ಧಿ ಹೇಳಿದ. ಪ್ರಿಯವ್ರತನು ಸಮ್ಮತಿಸಿ, **ಬರ್ಹಿಷ್ಮತಿ** (ಬರ್ಹಿಷ್ಮತಿ ನಗರದವಳು) ಎಂಬುವವಳನ್ನು ಮದುವೆ ಆದ..'' (ಪು.೫೧)

ಕಥೆ ಹೇಳುವಾಗ ನಡುನಡುವೆ ಮುಖ್ಯವಾದ ಅಂಶಗಳನ್ನು **ದಪ್ಪಕ್ಷರದಲ್ಲಿ** ಮುದ್ರಿಸಿ ಓದುಗನ ಗಮನ ಸೆಳೆದಿರುವುದು ಇಲ್ಲಿನ ವಿಶೇಷತೆ. ಇದಲ್ಲದೆ, ನಡುನಡುವೆ ಕಥೆಗೆ ಪೂರಕವಾದ ಇತರ ಮಾಹಿತಿಗಳನ್ನು ನೀಡಲಾಗಿದೆ. ದ್ವಾದಶ ಆದಿತ್ಯರು ಯಾರು, (ಪು. ೬೮), ೧೪ ಮನುಗಳು ಹಾಗೂ ಮನ್ವಂತರ ಇವುಗಳ ವಿವರ (ಪು. ೭೮), ಸಮುದ್ರಮಥನದಿಂದ ಹೊರಬಂದ ೧೪ ರತ್ನಗಳ ಸಾಂಕೇತಿಕ ಅರ್ಥ (ಪು. ೮೨), ಕೃಷ್ಣನ ಕಥೆಯಲ್ಲಿ ನಡುನಡುವೆ ಹಲವು ಸ್ತುತಿಗಳು — ಈ ಎಲ್ಲ ವಿವರಗಳಿಂದ ಈ ಕೃತಿ ಬಹಳ ಉಪಯುಕ್ತವೆನಿಸಿದೆ. ಡಾ. ಗುರುರಾಜ ಕರಜಗಿಯವರ ಮುನ್ನುಡಿ, ಶ್ರೀವಾಮನಾಶ್ರಮ ಸ್ವಾಮಿಗಳ ಆಶೀರ್ವಾದಗಳೊಂದಿಗೆ ಕೃತಿ ಪ್ರಕಟಗೊಂಡಿದೆ. ಸುಲಭ ಬೆಲೆಗೆ, ಉತ್ತಮ ಮುದ್ರಣದಿಂದ ಕೂಡಿದ ಈ ಕೃತಿ ಸಕಲರಿಗೂ ಸಂಗ್ರಹಯೋಗ್ಯವಾಗಿದೆ. ✶